ಪಂಚಾಯತ್ ಕಟ್ಟಡ ಸಂಪೂರ್ಣ ಶಿಥಿಲಗೊಂಡಿರುವ ಬಗ್ಗೆ.

116 (361) ಶ್ರೀ ಸುಭಾಷ ಆರ್. ಗುತ್ತೇದಾರ್ (ಆಳಂದ):- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕು ಪಂಚಾಯತ್‌ಗೆ ಸರ್ಕಾರಿ ಕಟ್ಟಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಕಟ್ಟಡದ ವಿಸ್ತೀರ್ಣ ಎಷ್ಟು (ಚಕ್ಕುಬಂದಿಯೊಂದಿಗೆ ವಿವರಗಳನ್ನು ನೀಡುವುದು) ;

ಇ) ಸದರಿ ತಾಲ್ಲೂಕು ಪಂಚಾಯತ್ ಕಟ್ಟಡವು ಸಂಪೂರ್ಣ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹೊಸ ಕಟ್ಟಡವನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು ; ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ಹೌದು, ಹಿಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿ ಕಾರ್ಯಾಲಯವನ್ನೇ ಇಂದಿನ ತಾಲ್ಲೂಕು ಪಂಚಾಯತಿಯ ಕಾರ್ಯಾಲಯವನ್ನಾಗಿ ಮುಂದುವರಿಸಲಾಗಿದೆ.

ಆ) ಕಟ್ಟಡದ ವಿಸ್ತೀರ್ಣ ಮತ್ತು ಚೆಕ್ಕುಬಂದಿ ಈ ಕೆಳಗಿನಂತಿದೆ :

ಕಟ್ಟಡದ ಒಟ್ಟು ವಿಸ್ತೀರ್ಣ – 13330.75 ಚ.ಅಡಿಗಳು

1. ತಾಲ್ಲೂಕು ಪಂಚಾಯತ್ ಕಾರ್ಯಾಲಯ 82 X 60.25"
2. ತಾಲ್ಲೂಕು ಪಂಚಾಯತ್ ಸಭಾಂಗಣ 23.50 X 65"
3. ತಾಲ್ಲೂಕು ಪಂಚಾಯತ್ ಅತಿಥಿ ಗೃಹ 37 X 55.75"
4. ನಿರ್ಮಾಣ ಹಂತದಲ್ಲಿರುವ ಸಾಮರ್ಥ್ಯ ಸೌಧ 80 X 60"

ಚೆಕ್ಕುಬಂದಿ ವಿವರ

4. ಪೂರ್ವಕ್ಕೆ – 30 ಅಡಿ ಸರ್ಕಾರಿ ರಸ್ತೆ
5. ದಕ್ಷಿಣಕ್ಕೆ – 30 ಅಡಿ ಸರ್ಕಾರಿ ರಸ್ತೆ

6. ಪಶ್ಚಿಮಕ್ಕೆ – ಪುರುಸಭೆ ವಸತಿ ಗೃಹ ಹಾಗೂ ಖಿಲ್ಲಾ ಜಾಗಾ
7. ಉತ್ತರಕ್ಕೆ – 30 ಅಡಿ ಸರ್ಕಾರಿ ರಸ್ತೆ

ಇ) ಈ ಕಟ್ಟಡ 1958ರಲ್ಲಿ ನಿರ್ಮಾಣವಾಗಿದ್ದು, ಈಗ ತಾಲ್ಲೂಕು ಪಂಚಾಯತ್ ಕಾರ್ಯಾಲಯ ಅದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಟ್ಟಡ ಶಿಥಿಲಾವಸ್ಥೆಯಲ್ಲಿದೆ.

ಈ) ಇಲ್ಲ, ಆದರೆ ಕಟ್ಟಡವನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ಉದ್ಭವಿಸುವುದಿಲ್ಲ.

ಶ್ರೀ ಸುಭಾಷ್ ಆರ್. ಗುತ್ತೇದಾರ್ : ಉತ್ತರವನ್ನು ಒದಗಿಸಿದ್ದಾರೆ. ಆಳಂದ ತಾಲ್ಲೂಕು ಪಂಚಾಯಿತಿಯ ಕಟ್ಟಡವನ್ನು 1958ರಲ್ಲಿ ಕಟ್ಟಲಾಗಿದೆ ಎಂದು ಹೇಳಿದ್ದಾರೆ. ಅದು ಪೂರ್ಣ ಶಿಥಿಲಗೊಂಡಿದೆ ಮತ್ತು ಅಲ್ಲಿ ಬಹಳಷ್ಟು ಅಧಿಕಾರಿಗಳಿಗೆ ಕೂರುವುದಕ್ಕೆ ಜಾಗವಿಲ್ಲ ಮತ್ತು ಮಳೆ ಬಂದರೆ ಕಟ್ಟಡ ಸೋರುತ್ತದೆ. ಹಾಗಾಗಿ, ಅಲ್ಲಿ ಹೊಸ ಕಟ್ಟಡ ಬೇಕು ಎಂದು ಕೇಳಿದರೆ ಉದ್ಭವಿಸುವುದಿಲ್ಲ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ದಯವಿಟ್ಟು ಅಲ್ಲಿ ತಾವು ಒಂದು ಹೊಸ ತಾಲ್ಲೂಕು ಪಂಚಾಯಿತಿ ಕಟ್ಟಡವನ್ನು ಕೊಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಮತ್ತೊಂದು ಪ್ರಶ್ನೆಯಲ್ಲಿ ಈ ಕಟ್ಟಡದ ವಿಸ್ತೀರ್ಣ ಎಷ್ಟು ಎಂದು ಕೇಳಿದ್ದರೆ, ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅಲ್ಲಿ ಇದಕ್ಕೆ ಸರಿಯಾದ documents ಇಲ್ಲ. ನಾನು ಈ ಪ್ರಶ್ನೆಯನ್ನು ಕೇಳಿದ ಉದ್ದೇಶವೆಂದರೆ, ನಮ್ಮಲ್ಲಿ 36 ಎಕರೆ ಪ್ರದೇಶದಲ್ಲಿ Veterinary, Taluk Panchayat, P.W.D., Health, Education ಈ ಎಲ್ಲ ಕಛೇರಿಗಳು ಒಂದೇ ಕಡೆ ಇವೆ. ಮತ್ತು ಅಲ್ಲಿ quarters ಸಹ ಇವೆ. ಇವೆಲ್ಲ ಇದ್ದರೂ ಕೂಡ ಖಾಸಗಿಯವರು ಆ ಜಾಗವನ್ನು acquire ಮಾಡಿಕೊಳ್ಳುತ್ತಿದ್ದಾರೆ. P.W.D. quarters ಮತ್ತು Taluk Panchayat quarters ಮಧ್ಯದಲ್ಲಿ ಖಾಸಗಿಯವರು ಮನೆ ಕಟ್ಟಿದ್ದಾರೆ. ಅದರ ಸಲುವಾಗಿ ಹೇಳುತ್ತಿದ್ದೇನೆ, ಆ ಜಮೀನಿನ ಬಗ್ಗೆ ಏನಾದರೂ documentsಇದ್ದರೆ ಸರಿ, ಇಲ್ಲದಿದ್ದರೆ documents ಮಾಡಿಕೊಳ್ಳಬೇಕು. ಏಕೆಂದರೆ, ಖಾಸಗಿಯವರು ಕಬ್ಜಾ ಮಾಡುತ್ತಿದ್ದಾರೆ. ಅಲ್ಲಿ ತಾಲ್ಲೂಕು ಪಂಚಾಯತ್ ಆಫೀಸ್ ಮಂಜೂರಾದರೂ ಸಹ ಕಟ್ಟಡ ಕಟ್ಟಿಕೊಂಡಿಲ್ಲ. ಅದಕ್ಕಾಗಿ ಈ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುವಿರಾ ಎಂದು ಕೇಳಲು ಬಯಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸುಭಾಷ್ ಗುತ್ತೇದಾರ್‌ರವರು, ಆಳಂದ ತಾಲ್ಲೂಕು ಪಂಚಾಯಿತಿಯ ಕಟ್ಟಡವು 1958ರಲ್ಲಿ ನಿರ್ಮಾಣವಾಗಿದ್ದು, ಈಗ ಅದನ್ನು ಹೊಸದಾಗಿ

ಕಟ್ಟಿಸಿ ಕೊಡಿ ಎಂದು ಕೇಳುತ್ತಿದ್ದಾರೆ. ಈಗಾಗಲೇ ನಾವು ಬೇರೆಬೇರೆ ಗ್ರಾಮ ಪಂಚಾಯಿತಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಕ್ರಮಗಳನ್ನು ಕೈಗೊಂಡಿದ್ದೇವೆ. ಬಹಳಷ್ಟು ಕಡೆಗಳಲ್ಲಿ ನೂರಾರು ಗ್ರಾಮ ಪಂಚಾಯಿತಿ ಕಟ್ಟಡಗಳು ಈಗ ನಿರ್ಮಾಣವಾಗುತ್ತಿವೆ. ಮುಂದೆ, ಅನುದಾನದ ಲಭ್ಯತೆಯನ್ನು ನೋಡಿಕೊಂಡು ಈ ತಾಲ್ಲೂಕು ಪಂಚಾಯಿತಿಯ ಕಟ್ಟಡವನ್ನು ನಿರ್ಮಾಣ ಮಾಡಲೂ ಸಹ ನಾನು ಹೆಚ್ಚಿನ ರೀತಿಯಾದ ಮಹತ್ವವನ್ನು ಮತ್ತು ಆದ್ಯತೆಯನ್ನು ಕೊಡುತ್ತೇನೆ. ಇದರ ಜೊತೆಗೆ, ತಾವು ಕಟ್ಟಡದ ವಿಸ್ತೀರ್ಣದ ಬಗ್ಗೆ ಪ್ರಶ್ನೆಯನ್ನು ಕೇಳಿದಿರಿ. ಇದನ್ನು ನೋಡಿದಾಗಲೇ, ಸುಭಾಷ್ ಗುತ್ತೇದಾರ್‌ರವರು ಏಕೆ ಕಟ್ಟಡದ ವಿಸ್ತೀರ್ಣದ ಬಗ್ಗೆ, ಚಕ್ಕುಬಂದಿಯ ಬಗ್ಗೆ ಪ್ರಶ್ನೆ ಕೇಳುತ್ತಿದ್ದಾರೆ ಎನ್ನುವ ಸಂಶಯ ನನಗೆ ಬಂದಿತ್ತು. ಕಟ್ಟಡದ ವಿಸ್ತೀರ್ಣ ಎಷ್ಟು, ಚಕ್ಕುಬಂದಿ ಇವೆಲ್ಲವೂ ನಮ್ಮ documentsನಲ್ಲಿ ಇರುವುದಿಲ್ಲ. ಹೀಗಾಗಿ ನಾನೇ ಸ್ವತಃ direction ಕೊಟ್ಟು, ಅದನ್ನು actual ಅಳತೆ ಮಾಡಿಸಿ, ಕಟ್ಟಡ ಎಷ್ಟು Sq.ft. ಇದೆ ಎನ್ನುವ ಮಾಹಿತಿಯನ್ನು ತರಿಸಿ, ಚಕ್ಕುಬಂದಿಯ ಮಾಹಿತಿಯನ್ನೂ ಸಹ ತಮಗೆ ಕೊಟ್ಟಿದ್ದೇನೆ. ಅಲ್ಲಿನ ಸರ್ಕಾರದ ಜಮೀನನ್ನು ಖಾಸಗಿಯವರು encroachment ಮಾಡುತ್ತಿದ್ದಾರೆ ಎಂದು ತಾವು ಹೇಳಿದಿರಿ, ಅಲ್ಲಿ ಸರ್ಕಾರಿ ಜಮೀನು ಎಷ್ಟಿದೆ ಎನ್ನುವುದಕ್ಕೆ ಸಂಬಂಧಿಸಿದ ಎಲ್ಲ ಕಾಗದ ಪತ್ರಗಳನ್ನು ತೆಗೆಸಿ, ಅದನ್ನು ಸರಿಯಾದ ರೀತಿಯಲ್ಲಿ ಸರ್ವೆ ಮಾಡಿಸಿ, ಅದನ್ನು ಸಂರಕ್ಷಣೆ ಮಾಡುವುದರ ಜೊತೆಗೆ, ಸರ್ಕಾರದ ಜಾಗವನ್ನು ಯಾರಾದರೂ ಖಾಸಗಿಯವರು ಅತಿಕ್ರಮಣ ಮಾಡಿಕೊಂಡಿದ್ದರೆ ಅದಕ್ಕೂ ತಡೆಕೊಡುವುದು ಮತ್ತು encroachment remove ಮಾಡಲೂ ನಾನು ಕ್ರಮ ಕೈಗೊಂಡು ತಕ್ಷಣವೇ direction ಕೊಡುತ್ತೇನೆ.

ನಗರ ಶಾಲೆಗಳಲ್ಲಿರುವ ಸಮಸ್ಯೆ ಬಗ್ಗೆ

117 (964) ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್):– ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾಲಕ್ಷ್ಮಿಪುರಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಸರ್ಕಾರಿ, ಖಾಸಗಿ (ಅನುದಾನಿತ) ಮತ್ತು ಖಾಸಗಿ ಶಾಲೆಗಳಿವೆ (ಪೂರ್ಣ ವಿವರ ನೀಡುವುದು)

ಆ) ಸರ್ಕಾರಿ ಶಾಲೆಗಳಿಗೆ ಸ್ವಂತ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರವಾದ ಮಾಹಿತಿ ನೀಡುವುದು)

ಇ) ಹಾಗಿದ್ದಲ್ಲಿ, ಸರ್ಕಾರ ಈ ತೊಂದರೆಗಳನ್ನು ನೀಗಿಸಲು ತೆಗೆದುಕೊಂಡ ಕ್ರಮವೇನು;

ಈ) ಖಾಸಗಿ ಶಾಲೆಗಳಲ್ಲಿ ಅತಿ ಹೆಚ್ಚಿನ ಡೊನೇಷನ್ ಮತ್ತು ಮಾಸಿಕ ಶುಲ್ಕವನ್ನು